ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ ಕಾರ್ಯಾಲಯ, ಹಾವೇರಿ -581110

ದೂರವಾಣಿ : 08375-249033
ಇ-ಮೇಲ್ – zphaveri@gmail.com ಫ್ಯಾಕ್ಸ : 08375-249037

ಕ್ರಸಂ:ಹಾಜಿಪಂ/ಅಭಿ-2/ಮನರೇಗಾ/ಹೊ.ಗು/ವಹಿ- /2023-24 ದಿನಾಂಕ: 13-10-2023.

## :: ಪತ್ರಿಕಾ ಪ್ರಕಟಣೆ ::

ವಿಷಯ : ಹಾವೇರಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಖಾಲಿ ಇರುವ ಹೊರಗುತ್ತಿಗೆ ಆಧಾರದ ಮೇಲಿನ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ.104:ಉಖಾಯೋ:2007 ಬೆಂಗಳೂರು ದಿನಾಂಕ:05-06-2009.

2) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ರವರ ಪತ್ರ ಸಂಖ್ಯೆ:ಇ.ಜಿ.ಎಸ್ /50/2021(ಇ-442252) ದಿನಾಂಕ:04-03-2021.

3) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ರವರ ಪತ್ರ ಸಂಖ್ಯೆ:ಇ.ಜಿ.ಎಸ್ /50/2021(ಇ-442252) ದಿನಾಂಕ:04-08-2021.

4) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ರವರ ಪತ್ರ ಸಂಖ್ಯೆ:ಇ.ಜಿ.ಎಸ್ /874/2022(ಇ-931951) ದಿನಾಂಕ:01-12-2022.

5) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/36/ಇ ಆಡಳಿತ/2020 ಬೆಂಗಳೂರು ದಿನಾಂಕ:25-06-2020.

6) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ರವರ ಪತ್ರ ಸಂಖ್ಯೆ:ಇ.ಜಿ.ಎಸ್ /29/2023/(ಇ-985295) ದಿನಾಂಕ:25-01-2023.

* * * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಮತ್ತು ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಹಾವೇರಿ ಜಿಲ್ಲೆಯಲ್ಲಿ 01 ಜಿಲ್ಲಾ ಎಂ.ಐ.ಎಸ್ ಸಂಯೋಕರು (DMIS), 01 ತಾಲೂಕು ಎಂ.ಐ.ಎಸ್ ಸಂಯೋಜಕರು (TMIS), 04 ತಾಂತ್ರಿಕ ಸಹಾಯಕರು ಸಿವಿಲ್ (TAE), 01 ತಾಂತ್ರಿಕ ಸಹಾಯಕರು ಕೃಷಿ (TAA), 04 ತಾಂತ್ರಿಕ ಸಹಾಯಕರು ತೋಟಗಾರಿಕೆ (TAH), 06 ತಾಂತ್ರಿಕ ಸಹಾಯಕರು ಅರಣ್ಯ (TAF), 01 ತಾಂತ್ರಿಕ ಸಹಾಯಕರು ರೇಷ್ಮೆ (TAS), 07 ಆಡಳಿತ ಸಹಾಯಕ (TP) ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳಿಗೆ ಕಾರ್ಯದಕ್ಷತೆ ಮತ್ತು ಸಾಮರ್ಥ್ಯದ ಮೇರೆಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲು ಸರ್ಕಾರದಿಂದ ಮಾರ್ಗಸೂಚಿಗಳನ್ನು ನೀಡಿದ್ದು, ಅದರಂತೆ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆಗಳು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ | ಅನುಭವ | ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕ & ಆನ್ ಲೈನ್ ವೆಬ್ ಸೈಟ್ ವಿಳಾಸ | ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ದಿನಾಂಕ ಮತ್ತು ಸಮಯ |
|---|---|---|---|---|---|---|---|
| 01 | ಜಿಲ್ಲಾ ಎಂ.ಐ.ಎಸ್ ಸಂಯೋಜಕರು (DMIS) | MCA or Graduation in Engineering in Computer/Electronics or any other equivalent qualification in absence of such condidates mentioned above Graduation PGDCA or any other equivalent cource by the recognised University. The Person shall not be more than 40 Years in age (For Candidates already working in MGNREGS the upper age limit shall be 44 Years) | 01 | 34000/- | ಕನಿಷ್ಠ 2 ವರ್ಷ | ದಿ: 27 -10-2023 ರಿಂದ 10-11-2023 ರ ವರೆಗೆ https://haveri.nic.in | ದಿ: 23-11-2023 ರಂದು ಬೆಳಿಗ್ಗೆ 10.30 ರಿಂದ ಸಂಜೆ 5.30 ವರೆಗೆ. ಸ್ಥಳ: ಜಿಲ್ಲಾ ಪಂಚಾಯತ ಕಾರ್ಯಾಲಯ, ಹಾವೇರಿ |

| | | | | | | | |
|---|---|---|---|---|---|---|---|
| 02 | ತಾಲೂಕ ಎಂ.ಐ.ಎಸ್ ಸಂಯೋಜಕರು(TMIS) | MCA or Graduation in Engineering in Computer/Electronics or any other equivalent qualification in absence of such condidates mentioned above Graduation PGDCA or any other equivalent cource by the recognised University. The Person shall not be more than 40 Years in age (For Candidates already working in MGNREGS the upper age limit shall be 44 Years) | 01 | 28000/- | ಕನಿಷ್ಠ 2 ವರ್ಷ | ದಿ: 27 -10-2023 ರಿಂದ 10-11-2023 ರ ವರೆಗೆ https://haveri.nic.in | ದಿ: 23-11-2023 ರಂದು ಬೆಳಿಗ್ಗೆ 10.30 ರಿಂದ ಸಂಜೆ 5.30 ವರೆಗೆ. ಸ್ಥಳ: ಜಿಲ್ಲಾ ಪಂಚಾಯತ ಕಾರ್ಯಾಲಯ, ಹಾವೇರಿ |
| 03 | ತಾಂತ್ರಿಕ ಸಹಾಯಕರು (ಸಿವಿಲ್) TAE | Diploma/B.E/B.Tech in Civil Engineering including use of Internet. The Age shall not be more than 45 years (Relaxation of 4 years shall be given to candidates already working in MGNREGA) | 04 | 26000+2000 (Diploma) 28000+2000 (B.E/B.Tech) | ಕನಿಷ್ಠ 2 ವರ್ಷ | | |
| 04 | ತಾಂತ್ರಿಕ ಸಹಾಯಕರು (ಅರಣ್ಯ) TAF | ಕನಿಷ್ಠ ವಿದ್ಯಾರ್ಹತೆ : B.Sc. (Forestry) ಅಪೇಕ್ಷಣೀಯ : Msc (Forestry) Age:21-40 | 06 | 28000+2000 | 0 ದಿಂದ 3 ವರ್ಷ | | |
| 05 | ತಾಂತ್ರಿಕ ಸಹಾಯಕರು (ಕೃಷಿ)TAA | ಕನಿಷ್ಠ ವಿದ್ಯಾರ್ಹತೆ : B.Sc. (Agriculture) ಅಪೇಕ್ಷಣೀಯ : Msc (Agriculture) Age:21-40 | 01 | 28000+2000 | 0 ದಿಂದ 3 ವರ್ಷ | | |
| 06 | ತಾಂತ್ರಿಕ ಸಹಾಯಕರು (ತೋಟಗಾರಿಕೆ)TAH | ಕನಿಷ್ಠ ವಿದ್ಯಾರ್ಹತೆ : B.Sc. (Horticulture) ಅಪೇಕ್ಷಣೀಯ : Msc (Horticulture) Age:21-40 | 04 | 28000+2000 | 0 ದಿಂದ 3 ವರ್ಷ | | |
| 07 | ತಾಂತ್ರಿಕ ಸಹಾಯಕರು (ರೇಷ್ಮೆ)TAS | ಕನಿಷ್ಠ ವಿದ್ಯಾರ್ಹತೆ : B.Sc. (Sericulture) ಅಪೇಕ್ಷಣೀಯ : Msc (Sericulture) Age:21-40 | 01 | 28000+2000 | 0 ದಿಂದ 3 ವರ್ಷ | | |
| 08 | ಆಡಳಿತ ಸಹಾಯಕ (ತಾ.ಪಂ) | ವಿದ್ಯಾರ್ಹತೆ : B.Com ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ನಲ್ಲಿ ಪರಿಣಿತಿ ಹೊಂದಿರಬೇಕು (MS World, Excel, Power Point Presentation) ಕಂಪ್ಯೂಟರ್ ಜ್ಞಾನ ಹೊಂದಿರಬೇಕು. | 07 | 22000/- | - | | |

3...

**ವಿಶೇಷ ಸೂಚನೆ :**

1) ಆನ್ ಲೈನ್ ಮೂಲಕ ಮಾತ್ರ **https://haveri.nic.in /Website** ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
2) **ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 27-10-2023. ಮುಕ್ತಾಯ ದಿನಾಂಕ:10-11-2023**
3) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಮೂದಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ದಾಖಲಾತಿ ಪರಿಶೀಲನೆ ಸಂದರ್ಭದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.
4) ಮೂಲ ದಾಖಲೆಗಳನ್ನು ಪರಿಶೀಲಿಸಲು ನಿಗದಿಪಡಿಸಿರುವ ದಿನಾಂಕ: 23-11-2023 ರಂದು ಸಂಜೆ 5.30 ರೊಳಗಾಗಿ ಹಾಜರಾಗುವ ಅಭ್ಯರ್ಥಿಗಳ ದಾಖಲೆಗಳನ್ನು ಮಾತ್ರ ಪರಿಶೀಲಿಸಲಾಗುವುದು.
5) ಸಂಬಂಧಪಟ್ಟ ವಿಷಯದಲ್ಲಿ ಪದವಿ ಹೊಂದಿದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಪದವೀಧರರು ಲಭ್ಯವಿಲ್ಲದೇ ಇದ್ದಲ್ಲಿ ಮಾತ್ರ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು.
6) 40 ವರ್ಷ ಮೇಲ್ಪಟ್ಟವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
7) ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ವಿದ್ಯಾರ್ಹತೆಯಲ್ಲಿ ಹೊಂದಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ, ಸದರಿ ಪಟ್ಟಿಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಹುದ್ದೆಗೆ ಆಯ್ಕೆ ಮಾಡಲಾಗುವುದು. (ಸರ್ಕಾರದಿಂದ ನಿಗದಿಪಡಿಸಿರುವ ಎಲ್ಲಾ ಮಾರ್ಗಸೂಚಿಗಳನ್ವಯ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು)
8) ಅಭ್ಯರ್ಥಿಗಳು ಸ್ಥಳ ನಿಯುಕ್ತಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರ ವಿವೇಚನೆಗೆ ಒಳಗೊಂಡಿರುತ್ತದೆ.
9) ಹುದ್ದೆಗೆ ಆಯ್ಕೆ ಮಾಡಲಾದ ಅಭ್ಯರ್ಥಿಗಳು ನಿಯೋಜಿಸಿದ ಸ್ಥಳಕ್ಕೆ 07 ದಿನಗಳೊಳಗಾಗಿ ಹಾಜರಾಗದಿದ್ದಲ್ಲಿ ಅರ್ಹತಾ ಪಟ್ಟಿಯಲ್ಲಿನ ನಂತರದ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಲಾಗುವುದು.
10) ಆನ್ ಲೈನ್ ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡತಕ್ಕದ್ದು.
11) ಅರ್ಜಿಯೊಂದಿಗೆ ಲಗತ್ತಿಸಬೇಕಾದ (ಅಪ್ ಲೋಡ್ ಮಾಡಬೇಕಾದ) ದಾಖಲೆಗಳು.

    (ಅ) ಅಭ್ಯರ್ಥಿಯ ಸಹಿಯೊಂದಿಗೆ ದೃಢೀಕರಿಸಿದ ಇತ್ತೀಚಿನ ಭಾವಚಿತ್ರ (In JPG Formate)
    (ಆ) ಎಸ್. ಎಸ್. ಎಲ್. ಸಿ., ಅಂಕಪಟ್ಟಿ (IN Pdf File)
    (ಇ) ಶೈಕ್ಷಣಿಕ ವಿದ್ಯಾರ್ಹತೆಯ ಎಲ್ಲ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಗಳ ಪ್ರತಿ (In Pdf File)
    (ಈ) ಕಾರ್ಯಕ್ಷೇತ್ರದಲ್ಲಿ ಅನುಭವ ಹೊಂದಿರುವ ಪ್ರಮಾಣ ಪತ್ರ. (In Pdf File)

12) ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸರ್ಕಾರದಿಂದ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ.
13) ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ಸೇವೆ ಪಡೆಯಲು ಯಾವುದೇ ನೇರ ಸಂದರ್ಶನ ಅಥವಾ ಲಿಖಿತ ಪರೀಕ್ಷೆ ಇರುವುದಿಲ್ಲ.
14) ಮೆರಿಟ್ ಮೇಲೆ ಆಯ್ಕೆಯಾದ ಅಭ್ಯರ್ಥಿಗಳ ಸೇವೆಯನ್ನು ಜಿಲ್ಲೆಯಲ್ಲಿ ಅನುಮೋದಿತ ಮಾನವ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ಸೇವೆ ಪಡೆದುಕೊಳ್ಳಲಾಗುವುದು.
15) ಹೊರಗುತ್ತಿಗೆ ಸೇವಾ ಅವಧಿಯು 11 ತಿಂಗಳಾಗಿದ್ದು ಇವರ ಕಾರ್ಯಕ್ಷಮತೆ ಪರಿಶೀಲಿಸಿ ಹೊರಗುತ್ತಿಗೆ ಸೇವೆ ಮುಂದುವರೆಸುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ.
16) ನೇಮಕಗೊಂಡ ಹೊರಗುತ್ತಿಗೆ ಸಿಬ್ಬಂದಿಯು ವಾರ್ಷಿಕ 12 ದಿನಗಳ ಸಾಂದರ್ಭಿಕ ರಜೆ ಪಡೆಯಬಹುದು.

4...

17) ಮಹಿಳಾ ಅಭ್ಯರ್ಥಿಗಳು Maternity Benefit Act 1961 ರಡಿಯಲ್ಲಿ ಹೆರಿಗೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.
18) ಆಯ್ಕೆಯಾದ ಅಭ್ಯರ್ಥಿಗಳು ತಾವು ನಿರ್ವಹಿಸುವ ಸ್ಥಳದಲ್ಲಿ ಅವ್ಯವಹಾರ ಅಥವಾ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಸಾಬೀತಾದಲ್ಲಿ ತಕ್ಷಣವೇ ಕೆಲಸದಿಂದ ತೆಗೆದುಹಾಕಲಾಗುವುದು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
19) ಭರ್ತಿಯಾದ ಹುದ್ದೆಗಳಲ್ಲಿ ಅನಿವಾರ್ಯ ಕಾರಣ ನಿಮಿತ್ತ ಖಾಲಿಯಾದಲ್ಲಿ ಮೇಲ್ಕಾಣಿಸಿದ ರೀತಿಯಲ್ಲಿಯೇ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಹೊರಗುತ್ತಿಗೆ ಆಧಾರದ ಸೇವೆ ಪಡೆಯಲಾಗುವುದು.
20) ಒಂದು ವೇಳೆ ಮೇರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು. ಮೇರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಖಾಲಿಯಾಗುವ ಈ ಹುದ್ದೆಗಳಿಗೆ ಆಯ್ಕೆಗೆ ಪರಿಗಣಿಸಲಾಗುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ, ಹಾವೇರಿ.

ಪ್ರತಿ :

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾ ಮಟ್ಟದ ವಿವಿಧ ಸಂಪರ್ಕ ಇಲಾಖೆಗಳ ಮುಖ್ಯಸ್ಥರಿಗೆ ತಮ್ಮ ಕಾರ್ಯಾಲಯದ ಹಾಗೂ ತಮ್ಮ ಅಧೀನ ಬರುವ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲು ಕೋರಿದೆ.
3. ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಇವರಿಗೆ ತಮ್ಮ ಕಾರ್ಯಾಲಯದ ಹಾಗೂ ಅಧೀನ ಬರುವ ಗ್ರಾಮ ಪಂಚಾಯತಿಗಳ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲು ಸೂಚಿಸಿದೆ.
4. ರಕ್ಷಾ ಕಡತಕ್ಕೆ.